Regd No M 1299 34 th Year M. Edn. ತಾ॥ 2—1—51

ಸತ್ಯವಾದಿ
SATYAVADI

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಪುಣೆಯ ಹಳೇ ಪತ್ರಿಕೆ ನಿಂತಿತು

ಇಂದಿನಿಂದ ಪೂನಾದ "ಧ್ಯಾನಪ್ರಕಾಶ" ಪತ್ರಿಕೆ ಪ್ರಕಟಣೆ ನಿಂತಿದೆ. ಈ ಪತ್ರಿಕೆ 103 ವರ್ಷಗಳ ಹಿಂದೆ ಸ್ಥಾಪಿತವಾಗಿತ್ತು.

ಪಾಟಿಯಾಲಾ ವಕೀಲರುಗಳಿಗೆ ಪಡಿತರ ಮೇಲೆ ವಾರ್ತೆ ಐದು ಸೇರು ಸಕ್ಕರೆ ಹೆಚ್ಚಾಗಿ ಕೊಡಲಾಗುವುದು.

Kann. (Eng. 437)

ಪ್ರಾಚೀನ ಇಂಡಿಯನರ ಬುದ್ಧಿ

ಸಾಮಾನ್ಯವಾಗಿ ಇಂಡಿಯನ್ನರ ಬಗ್ಗೆ ನಮ್ಮ ಜ್ಞಾನ ಅಲ್ಪ. ನಿಬಂಧನನು ಶಿವಾರ, ಅವರು ಕಂಪು ಚರ್ಮದವರು, ಸಮಾರಂಭಗಳಲ್ಲಿ ಪ್ರಸಿದ್ಧವಾದ ಗರಿಗಳ ತಲೆದಿರುಸನ್ನು ತೊಡವವರು ಎಂಬುದಕ್ಕಿಂತ ಇನ್ನೇನು ಹೆಚ್ಚು ಗೊತ್ತಿಲ್ಲ

ಅನೇಕ ಇಂಡಿಯನ್ ಪಂಗಡಗಳು, ಹೇಗಾದರೂ, ಉನ್ನತ ಮಟ್ಟದ ನಾಗರಿಕತೆ ಕುರಿತು ಜಂಭ ಕೊಚ್ಚಬಹುದು. ಅಜಿಕ್ಟೆ ವಂಶ ಇಂಕಾಸ್‌ನ ಕಲೆ ಅತಿ ಶ್ರೇಷ್ಠ ದರ್ಜೆಯಲ್ಲಿ ನಿಂತಿತು. ಅಷ್ಟಲ್ಲದೆ ಅವರ ಜ್ಞಾನ ಇತರ ಪ್ರದೇಶಗಳಲ್ಲೂ ವಿಶಾಲವಾಗಿದ್ದಿತು ಮಧ್ಯ ಹಾಗೂ ದಕ್ಷಿಣ ಅಮೇರಿಕದ ಇಂಡಿಯನ್ನರು ಪ್ರಸಿದ್ಧರಾದ ವೂಲಿಕೆ ಬಲ್ಲನ್ನು. ಈ ವಿಶೇಷ ವಿಜ್ಞಾನದ ಜ್ಞಾನ ವಂಶ ಪಾರಂಪರ್ಯವಾಗಿ ಎಲ್ಲಾ ಕಾಲಗಳಲ್ಲಿಯೂ ಹಸ್ತಗತವಾಗುತ್ತಿದೆ ಬಹುವಾಗಿ ಎಲ್ಲಾ ಕಾಯಿಲೆಗಳಿಗೂ ನಿಗದಿಯಾದ ಔಷಧ ಮೂಲಿಕೆಗಳು ಗೊತ್ತಾಗಿದೆ. ಕೆಲವು ವರ್ಷಗಳ ಹಿಂದೆ ಪ್ರಕಟವಾದ ಪುಸ್ತಕದಲ್ಲಿ, 400 ಕ್ಕೆ ಕಡಿಮೆ ಇಲ್ಲದೆ ಔಷಧ ಮೂಲಿಕೆಗಳು ಪಟ್ಟಿ ಮಾಡಲ್ಪಟ್ಟಿದ್ದುವು

ಹೆಸರಾದ 'ವ್ಯಾನ್ ಜಾನಿಲ್ಲೊ' ಎಂಬ ಒಂದು ವಿಧದ ಟಿ ಸರ್ಫಟಿಡ್ ಜೊಟ್ಟಿಗೆ ಮತ್ತು "ಲುಪಾಂಕೆ" ಎಂಬ ಒಂದು ಒಣಗಿದ ದ್ಯಾಟಲ್ ಹಾವಿನ ಕಡಿತಕ್ಕೆ ಪೊಲ್ಟಿಸ್ಟ್ ಕಟ್ಟಲು ವಕ್ತು ಚೇಳು ಕಡಿತಕ್ಕೆ ಉಪಯೋಗಿಸಲಾಗುವುದು. ಮೂಳೆ ವರಿದಿಯುವುದು ಹಾಗೂ ಮೂಂಸ ಗಾಯಗಳನ್ನೂ ಒಂದು ವಿಧದ ಕ್ಯಾಕ್ಟಸ್ ಎಲೆಗಳಿಂದ ಗುಣ ಮಾಡುವುದು ಪ್ರಸಿದ್ಧವಾಗಿದೆ

ಸಿಂಕೋನ ತೊಗಟೆಯಲ್ಲಿ ವಿರೇಚಿಯ ಔಷಧ ವೀಯುವುದು ಪ್ರಾಚೀನ 'ಇಂಕಾಸ್' ನ ಪ್ರಪಂಚ ಪ್ರಸಿದ್ಧ ಔಷಧ ಅದರಲ್ಲಿನ ಗುಣಕಾರಿ ಶಕ್ತಿಯನ್ನು ಕಂಡು ಹಿಡಿದವರು ಇಂಡಿಯನ್ನರು ಮತ್ತು ಈ ದಿನದವರಿಗೆ ಈ ಪ್ರಾಕೃತಿಕ ವಸ್ತು ಅಪಾಯಕಾರಿಯಾದ ಮಲೇರಿಯಾ ಜ್ವರಗಳಿಗೆ ಸಿದ್ಧೌಷಧವಾಗಿದೆ

1938 ರಲ್ಲಿ, ಈಗ ಸ್ಥಾಪಿತವಾಗಿರುವ ಲೀಗ್ ಆಫ್ ನೇಷನ್ಸ್‌ನ ಮಲೇರಿಯ ಪರಿಣಿತರ ಸಮಿತಿ, ಮಲೇರಿಯ ಬಾಧಿತ ಜನರಿಗೆ ಕ್ವಿನೈನ್ 5 ½ ದಿನಗಳ ವರೆಗೆ ತೆಗೆದುಕೊಳ್ಳಲೇ ಬೇಕು ಮತ್ತು ನಿರೋಧಕಾರ್ಥವಾಗಿ ಮಲೇರಿಯ ಕಾಲದಲ್ಲಿ ಪ್ರತಿ ದಿನ 6 ಗ್ರೈನುಗಳಷ್ಟು ಕ್ವಿನೈನ್ ತೆಗೆದುಕೊಳ್ಳಲೇ ಬೇಕು ಕ್ವಿನೈನ್ ಯೋಗ್ಯ ಸಿದ್ಧೌಷಧ ಎಂದು ಮಾದಿ ಮಾಡಿದೆ

ಉಡ್‌ಲ್ಯಾಂಡ್ಸ್ 29—12—50 ರಿಂದ

ಬೇಗಂ ವ್ಯಾಪ್ತಿ, ಗೀತಾ ಬಾಲಿ, ಭಾರತ ಭೂಷಣ ಪಾತ್ರವಹಿಸಿರುವ

ಸೊಹಾಗ್ ರಾತ್

ಸಂಗೀತ ನೃತ್ಯಮಯ ಸುಂದರ ಹಿಂದಿ ಚಿತ್ರ — ದಿನವಹಿ 3 ಪ್ರದರ್ಶನಗಳು

ರಣಜಿತ್ ಅಮೋಘ 3 ನೇ ವಾರ

ಸರ್ಗಂ Sargam

ರೆಹನಾ — ರಾಜ ಕಪೂರ್ — ಪಾರೋ — ಮವಮ್ತಾಜಲ್ಲಿ — ಓಂಪ್ರಕಾಶ್

ಅಭಿನಯದಿಂದ ಕೂಡಿದ ಅತ್ಯಮೋಘ ಹಿಂದಿ ಚಿತ್ರ

ಸಕಲರೂ ನೋಡಬೇಕಾದ ಚಿತ್ರ — ಪ್ರತಿ ದಿನ 3 ಪ್ರದರ್ಶನಗಳು

ಅಪೇರಾ 30—12—50 ರಿಂದ

ಶ್ರೀ ಕೃಷ್ಣನ ಮನಸೆಳೆವ ಬಾಲಲೀಲೆಗಳು, ಕಂಸ ವಧೆ ಸಂಬಂಧದ ದೃಶ್ಯಗಳು ಕಂತಲಾಪುಲಕವಾಗಿ ಪ್ರದರ್ಶಿಸುವ ಸೊಗಸಾದ ತಮಿಳು ಚಿತ್ರ

ಕೃಷ್ಣವಿಜಯ

ಪದ್ಮಿನಿ

ಪ್ರೇಮಾವತಿ, ನರಸಿಂಹ ಭಾರತಿ, ಲಲಿತ, ಪದ್ಮಿನಿ ಅಭಿನಯಿಸಿರುವರು

ಪ್ರತಿ ದಿನ 3 ಆಟಗಳು

ಶುಭಾಶಯ

ನೂತನ ವರ್ಷದಲ್ಲಿ ಎಲ್ಲರಿಗೂ ಭಗವಂತನು ಶುಭವನ್ನುಂಟು ಮಾಡಲಿ — ಸತ್ಯವಾದಿ.

ರಜ ಮಂಜೂರು

ಜನವರಿ ತಾ॥ 26 ರಲ್ಲಿ ಸರ್ಕಾರಿ ಕಾರ್ಖಾನೆಗಳು ಕೆಲಸಗಾರರಿಗೆ ಸಂಬಳ ಸಹಿತ ರಜಾ ಕೊಡಬೇಕೆಂದು ಸರ್ಕಾರ ಸೂಚಿಸಿದೆ ಎಂದು ದೆಹಲಿ ವಾರ್ತೆ

ಜವುಳಿ ವರ್ತಕರ ಸಂಘ

ನಿನ್ನೆ ದಿವಸ ಮೈಸೂರು ಶ್ರೀ ಚಾಮುಂಡೇಶ್ವರಿ ಭವನದಲ್ಲಿ ವಾರ್ಷಿಕ ಸಭಾಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರು ಅಧ್ಯಕ್ಷತೆಯಲ್ಲಿ ಮೈಸೂರು ಜವುಳಿ ವರ್ತಕ ಸಂಘದ 7 ನೇ ವಾರ್ಷಿಕೋತ್ಸವ ಜರುಗಿತು. ಕಾರ್ಯದರ್ಶಿ ಶ್ರೀ ಯಜ್ಞಪ್ಪನವರು ವರದಿ ಪಠಿಸಿದರು ಅಧ್ಯಕ್ಷರು ಎಲ್ಲರಿಗೂ ರಾಮಚಂದ್ರರಾಯರು ಸ್ವಾಗತಿಸಿದರು ಶ್ರೀಮತಿ ನಾಗರತ್ನಮ್ಮನವರಿಂದ ಸಂಗೀತ ಕಚೇರಿ ಏರ್ಪಾಟಾಗಿತ್ತು.

ಮೈಸೂರು ಜಿಲ್ಲಾ ಸಭೆ

ಶ್ರೀ ಹೆಚ್. ಎಂ ಚನ್ನಬಸಪ್ಪನವರು ಅಧ್ಯಕ್ಷತೆಯಲ್ಲಿ ನೊನ್ನೆ ಮೈಸೂರು ಜಿಲ್ಲಾ ಸಭೆ ಜರುಗಿ ಅನೇಕ ವಿಷಯಗಳ ರಿಕಾರ್ಡಾದವು

ಸಂಮೇಳನ

ಮೈಸೂರು ಜ 1— ಮೈಸೂರು ಸಂಸ್ಥಾನದ ಪ್ರಾಂತೀಯ ಸಹಕಾರ ಸಮ್ಮೇಳನವು ನಿನ್ನೆ ಮತ್ತು ನೊನ್ನೆ ಕೋಲಸರೇಟರ್ಸ್ ಹೋಮಿನಲ್ಲಿ ನಡೆಯಿತು ಗೃಹ ಮಂತ್ರಿ ಶ್ರೀ ವರಿಯಪ್ಪನವರು ಪ್ರಾರಂಭೋತ್ಸವ ನೆರವೇರಿಸಿದರು

ಅನಾವರಣ

ಮೈಸೂರು ಜ 1— ಮೈಸೂರು ಪ್ರಾಂತೀಯ ಸಹಕಾರ ಸಂಸ್ಥೆಯ ಸ್ಥಾಪಕರಾದ ರಾಜಕಾರ್ಯ ಪ್ರಸಕ್ತ ರಾವ್ ಬಹದ್ದೂರ್ ದಿವಂಗತ ಶ್ರೀ ಎಂ. ಶಾಮರಾಯರ ಭಾವಚಿತ್ರ ಅನಾವರಣವು ನೆರವೇರಿತು

ಹಾನನದ

ದನಗಳ ಜಾತ್ರೆ

ಮತ್ತು ವಸ್ತು ಪ್ರದರ್ಶನ

— ಜನವರಿ —

1 ನೇ ತಾರೀಖಿನಿಂದ

— ಕ್ಯಾಟಲ್ ಷೋ ಕಮಿಟಿ.

ಆಹಾರ ಸಂಸ್ಥೆಗೆ ಸಂದರ್ಶನ

ಈ ಬೆಳಿಗ್ಗೆ ನಾನಾ ದೇಶಗಳ ಪ್ರಮುಖ ವಿಜ್ಞಾನಿಗಳು (ಅನೇಕರು ಅಣುಶಕ್ತಿಯ ಒಗ್ಗೆ ಕೆಲಸ ಮಾಡಿದ್ದಾರೆ) ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಸಂದರ್ಶನವನ್ನಿತ್ತರು ಸಂಶೋಧನಾಲಯದ ಡೈರೆಕ್ಟರ್ ಡಾ॥ ವಿ ಸುಬ್ರಹ್ಮಣ್ಯರು ಸರ್ವರನ್ನೂ ಸ್ವಾಗತಿಸಿ ನೂತನ ಸಂವತ್ಸರದ ಶುಭಾಶಯ ಕೋರಿದರು

ನೆಹರು ಆಗಮನ

ಬೆಂಗಳೂರಿಗೆ ಪಂ॥ ನೆಹರು ಆಗಮನ ಈ ಮಧ್ಯಾಹ್ನ 3-15 ಗಂಟೆಗೆ

ಮತಾಂತರ

ಶಿರಾಳ ಕೊಪ್ಪದಲ್ಲಿ 30 ಮಂದಿ ಹಿಂದೂ ಸ್ತ್ರೀಯರು ಮುಹಮ್ಮದೀಯ ಮತಕ್ಕೆ ಬಲಾತ್ಕಾರವಾಗಿ ಮತಾಂತರಿಸಲ್ಪಟ್ಟಿದ್ದಾರೆ ಮತ್ತು ವೀರಶೈವ ದೇವಾಲಯಗಳ ವಿಗ್ರಹಗಳನ್ನು ಭಿನ್ನಮಾಡಲಾಗಿದೆ ಎಂದು ಗೊತ್ತಾಗಿದೆ

† ಗಡಿನಾಡಿನ ಗಾಂಧಿ ಆರೋಗ್ಯ ನಡಿಸುತ್ತಿರುವುದಾಗಿ ಅಲ್ಲಿನ ಮಾಜಿ ಸಚಿವ ಮಹಮದ್ ಯಾಹಿಯಾ ಖಾನ್ ತಿಳಿಸಿದ್ದಾರೆ.

‡ ಸಾವಿರ ವಂದಿಯು ಜನಗಣತಿಗೆ ರೂ 43 ವೆಚ್ಚವಾಗುವುದೆಂದು ದೆಹಲಿ ವಾರ್ತೆ.

ಕಾಮನ್‌ವೆಲ್ತ್ ಕೂಟಕ್ಕೆ ಪಾಕ್ ಬಾರದಿರುವ ಬಗ್ಗೆ ದಿಲ್ಲಿ ನೃತ್ಯಗಳಲ್ಲಿ ಚಿಲೆಯೇ ಇತ್ತಿಲ್ಲ.

× ಕಾಶ್ಮೀರದ ಬಗ್ಗೆ ರಹಸ್ಯ ಸಮ್ಮೇಳನ ಜರುಗಿತೆಂದು ಕರಾಚಿ ವಾರ್ತೆ. ಪ್ರಧಾನಿ ಲಿಯಾಕತ್ ಲಂಡನ್ ಯಾತ್ರೆ ಮುಂದುವರಿಸಿದರು.

× ಲಂಡನ್ ಕಾಮನ್‌ವೆಲ್ತ್ ಕೂಟದಲ್ಲಿ ಫಕ್ರೂನಿಸ್ತಾನ್ ಪ್ರಶ್ನೆ ಸೇರಿಸಬೇಕೆಂದು ನುಲಾನಾ ಮಹಮದ್ ಅಕ್ಬರ್ ಖಾನ್ ದಿಲ್ಲಿಯಲ್ಲಿ ತಿಳಿಸಿದ್ದಾರೆ

ಸಂಪುಟ ೯ ಸಂಚಿಕೆ ೧೬ ॥ ಶ್ರೀ ॥ ತಾ॥ 1-1-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಶೃಷ್ಣಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಪೂಜ್ಯ ಶ್ರೀ ಕರಪಾತ್ರೀ ಸ್ವಾಮಿಗಳವರ
ಎರಡು ಭಾಷಣ

— ಸರ್ವಥಾ ಪಂಥಾಧೀನವಾದ ಬುದ್ಧಿಯು —
ಶಾಸ್ತ್ರಕ್ಕಿಂತ ದೊಡ್ಡದು ಹೇಗೆ?

(ಮುಂದುವರಿದುದು)

ಅಧುನಿಕ ದೃಷ್ಟಿಯಲ್ಲಿ ಕೇವಲ ಪ್ರತ್ಯಕ್ಷವೇ ಪ್ರಮಾಣವಾಗಿದೆ. ಕಿಂಚು ಅನುಮಾನ ಪ್ರಮಾಣವನ್ನೊಪ್ಪದೆ ಕೆಲಸ ನಡೆಯಲಾರದು. ಕಾರಣವೇನೆಂದರೆ ಅಗ ಪ್ರತ್ಯಕ್ಷವೇ ಪ್ರಮಾಣವೆಂದು ಸಹ ಹೇಳಲಾಗುವುದಿಲ್ಲ ಅವನೊಂದು ವೇಳೆ ಎಲ್ಲರನ್ನೂ ಕುರಿತು ಹೇಳುತ್ತಾನಾದರೆ. ಹೇಳುವವನು ಉನ್ಮತ್ತನು, ಬುದ್ಧಿವಂತನು ಅ ಕಡೆ ಪ್ರವೃತ್ತನೇ ಆಗಲಾರನು ಒಂದು ವೇಳೆ ಅಜ್ಞಾನಿಗಳನ್ನಾಗಲೀ ಸಂಶಯಾಳು ಜಿಜ್ಞಾಸುಗಳನ್ನಾಗಲೀ ಕುರಿತು ಹೇಳುವನಾದರೆ ಇತ್ತು, ಅಜ್ಞಾನ ಸಂಶಯ ಎಪರ್ಯಾಯಗಳನ್ನು ಅನನು ಹೇಗೆ ಅರಿತನು ? ಅನುಮಾನದಿಂದಲೆ ಪ್ರತ್ಯಕ್ಷದಿಂದಲೆ ? ಆದ್ದರಿಂದಲೇ ಅನುಮಾನವನ್ನಾದರೂ ಪಶು ಪಕ್ಷಿಗಳೂ ಮಾಡಿಕೊಳ್ಳುತ್ತವೆ ಅನಧಿಗತ ಅಬಾಧಿತಾರ್ಥ ಬೋಧಕತ್ವವೇ ಪ್ರಮಾಣಗಳ 'ಪ್ರಾಮಾಣ್ಯ' ವಾಗಿದೆ. ಹೀಗಿರುವಾಗ ಅನುಮಾನಕ್ಕೆ ಅನಧಿಗತ ಅಬಾಧಿತಾರ್ಥ ಬೋಧಕತೆಯಿಲ್ಲವೆಂಬುದನ್ನಾದರೂ ಹೇಗೆ ತಿಳಿಯಬಹುದು ?

ದೇವರೂ ಧರ್ಮಸತ್ಯೆಯೂ ಮಾನವೋನ್ನತಿಯಲ್ಲಿ ಬಾಧಕವೆಂದು ಸರ್ವೋದಯವಾದೀ – ಸಾಮ್ಯವಾದೀ ಜನರು ಹೇಳುತ್ತಾರೆ. ಅವರ ಸಿದ್ಧಾಂತವೇನೆಂದರೆ ಹೇಗೆ ಅಮ್ಲಬೀಜವೇ ಅಂಕುರಾದಿ ರೂಪದಿಂದ ಪರಿಣತವಾಗುತ್ತದೋ ಹಾಗೆಯೇ ರಜೋವೀರ್ಯರೂಪದಿಂದ ಪರಿಣತವಾದ ಮಹಾಭೂತವೇ ದೇಹಾದಿಗಳಂತೆ ಚೇತನ ರೂಪದಲ್ಲಿಯೇ ಪರಿಣತವಾಗುತ್ತದೆ. ಇನ್ನು ಒಡಪಾಯಿ ದೇವರ ಪಾಡೇನು ? ಕಿಂತು ಇದೆಲ್ಲ 'ಭೂತಭೌತಾನಿ ಸೋಪಾದಾನಗೋಚರಾಪರೋಕ್ಷ ಜ್ಞಾನವಜ್ಜನ್ಯಾನಿ ಕಾರ್ಯತ್ವಾತ್ ಶಯ್ಯಾವಾಸಾದಾದಿವತ್' ಎಂಬ ಅನುಮಾನದಿಂದ ಈಶ್ವರಸಿದ್ಧಿಯಾಗುತ್ತದೆ ಅಚೇತನಗಳ ಪ್ರವೃತ್ತಿಯು ಚೇತನಾಧಿಷ್ಠಿತವಾಗಿರುತ್ತದೆಂದೇ ಉದಾಹರಣೆಯಿಂದ ದೇಹಾದಿಗತಿರಿಕ್ತನಾದ ಆತ್ಮನ ಸಿದ್ಧಿಯಾಗುತ್ತದೆ. ಘಟಾದಿಗಳ ಅಪರೋಕ್ಷತಾ ಅಲೋಕವು ಚಕ್ಷುರಾದಿ ಸಾಪೇಕ್ಷವಾಗಿದೆ. ಕಿಂತು ಸತ್ವನಿಂಪೇಕ್ಷ ಅಪರೋಕ್ಷತೆಯು ಆತ್ಮನದ್ದಾಗಿದೆ

ಪ್ರತ್ಯಕ್ಷಾನುಮಾನಾಶ್ರಿತಾ ಮತಿಯು ಗತಿಯು ಎಲ್ಲಿಯವರೆಗಿರುವುದೋ, ಅಲ್ಲಿಯವರೆಗೇ ಯಾವನು ಮನ್ನಿಸವನೋ ಅವನು 'ನಾಸ್ತಿಕ' ಹಾಗೂ ಶಾಸ್ತ್ರದವರೆಗೆ ಮನ್ನಿಸುವವರು 'ಸು' ರಾಗುತ್ತಾರೆ. ವಾಸ್ತವಿಕ ವಿಷಯವೇನೆಂದರೆ, ಶಬ್ದ ಪ್ರಮಾಣವಿಲ್ಲದೆ ಲೌಕಿಕ ವ್ಯವಹಾರವೂ ನಡೆಯಲಾರದು ತನ್ನ ಮಾತಾಪಿತರ ಜ್ಞಾನವೂ ಶಬ್ದದ ಆಧಾರದ ಮೇಲೆಯೇ ಆಗುತ್ತದೆ. ಜಗಲೇ ಪ್ರಾಣಿಯು ಪಾಯಿಕ್ಕ ಭಾಗಿಯಾಗಬಲ್ಲನು. ಆದ್ದರಿಂದ ಶಾಸ್ತ್ರಪ್ರಮಾಣವನ್ನು ವನ್ನಿಸುವುದು ಉಚಿತವಾಗಿದೆ ಹಾಗೂ ಶಾಸ್ತ್ರ ಪಂಥಾಧೀನವಾದ ಬುದ್ಧಿಗೇ ಮಹತ್ವವಿದೆ. ... ಅದರಿಂದಲೇ ಅಭ್ಯುದಯ ನಿಶ್ರೇಯಸಗಳ ಸ್ವರೂಪವೂ ಸಾಧನದ ಸ್ವರೂಪವೂ ಜ್ಞಾತವಾಗುವುದಲ್ಲದೆ ಪರಮ ಕಲ್ಯಾಣವಾಗುವುದು.

ಲೋಕ ಕಲ್ಯಾಣಕ್ಕಾಗಿ

ಲೌಕಿಕ ಸಾಧನಗಳ ಆಶ್ರಯ ಪಡೆಯುವುದು ಮೂರ್ಖತನ. ಪ್ರಕೃತಿಯ ಕೋಪದಿಂದ ವಿನಾಶ ಅವಶ್ಯಂಭಾವಿ. ಧರ್ಮದ ಆಶ್ರಯವು ಪರಮಾವಶ್ಯಕ
— ಪೂಜ್ಯ ಶ್ರೀ ಸ್ವಾಮಿ ಕರಪಾತ್ರಿಗಳ ಭಾಷಣ —

ಕಾಶಿಯ ಆರ್ಯ ಮಹಿಳಾ ವಿದ್ಯಾಲಯದಲ್ಲಿ ಭಾಷಣ ಮಾಡುತ್ತಾ ಶ್ರೀ ಸ್ವಾಮಿಗಳವರು ಹೀಗೆಂದರು :— ಭಗವನ್ನಾಮ ಸ್ಮರಣೆ ಮಾಡುತ್ತಾ ಸ್ವಧರ್ಮದಲ್ಲಿ ನಿಷ್ಠೆಯೂ, ಅಧರ್ಮದಿಂದ ನಿವೃತ್ತಿಯೂ, ಪರಸ್ಪರ ಸದ್ಭಾವನೆಯೂ ಉಂಟಾದರೆ ವ್ಯಷ್ಟಿ-ಸಮಷ್ಟಿ ಸರ್ವರ ಕಲ್ಯಾಣವಾಗುತ್ತದೆ. ಧರ್ಮದ ರಕ್ಷಣೆಗಾಗಿಯೂ ಅಧರ್ಮಾಭ್ಯುತ್ಥಾನದ ಅಳಿವಿಗಾಗಿಯೂ ನಿರ್ಗುಣ ನಿರಾಕಾರ ಭಗವಂತನು ವ್ರಜೇಂದ್ರ ನಂದನನ ರೂಪದಲ್ಲಿ ಅವತಾರವೆತ್ತಿದನು ಹೇಗೆ ಯಾವುದೇ ವ್ಯವಹಾರಕ್ಕಾಗಿ ಮುಖ ಪ್ರಕಾಶವು ಅವಶ್ಯಕವೋ ಹಾಗೆಯೇ ಸಾಮಾಜಿಕ, ಧಾರ್ಮಿಕ, ರಾಷ್ಟ್ರೀಯ, ಅಂತರಾಷ್ಟ್ರೀಯ ಎ ವಹಾರವನ್ನು ನಡೆಯಿಸಲು, ಲೌಕಿಕ, ಪಾರಲೌಕಿಕ ಅಭ್ಯುತ್ಥಾನ ಮುಖ್ಯವುಗಳ ಸಾಧನಗಳಲ್ಲಿ ಜ್ಞಾನಕ್ಕಾಗಿಯೂ ಶಾಸ್ತ್ರವು ಅಪೇಕ್ಷಿತವಾಗುತ್ತದೆ. ಲೋಕದಲ್ಲಿ ತಮ್ಮ ಮಾತಾಪಿತೃಗಳ ಪರಿಜ್ಞಾನವು ಪ್ರತ್ಯಕ್ಷ ಅಥವಾ ಅನುಮಾನ ಪ್ರಮಾಣದಿಂದಾಗದೆ ಶಬ್ದಪ್ರಮಾಣದಿಂದಲೇ ಆಗುತ್ತದೆ ಅನುಮಾನ ಪ್ರಮಾಣದಲ್ಲಿ ಪಶು ಮುಂತಾದವೂ ಚತುರವಾಗಿವೆ. ರೊಟ್ಟಿಯನ್ನು ನೋಡಿ ಪ್ರವೃತ್ತಿವಾಗುವುದನ್ನೂ ದಂಡವನ್ನು ನೋಡಿ ಓಡುವುದನ್ನೂ ಅವೂ ಬಲ್ಲುವು. ಯಾರು ಪ್ರತ್ಯಕ್ಷಾನುಮಾನಾತಿಕ್ರಾಂತಿಯು ಗತಿಯು ತನಕವೇ ತತ್ವನೆಂದು ತಿಳಿಯುತ್ತಾರೊ ಅವರ ಗಾಣಿಯನ್ನು ವಾನರಗಳಿಗಿಂತ ಹೆಚ್ಚಾಗಿ ಮಾಡಲಾಗುವುದಿಲ್ಲ. ಯಾವುದೇ ಕಾರ್ಯದ ಔಚಿತ್ಯಾನೌಚಿತ್ಯವನ್ನು ತಿಳಿಯುವುದಕ್ಕಾಗಿ ಕಾಮ ಕ್ರೋಧ ಲೋಭಾದಿಗಳ ವೇಗವನ್ನು ತಡೆಯುವುದೂ ಬುದ್ಧಿಯ ಶಾಂತತೆಯೂ ಬೇಕಾಗಿರುತ್ತದೆ. ವೇಗವನ್ನು ತಡೆಯುವುದಕ್ಕೆ ಏಕ ಮಾತ್ರ ಸಾಧನವು ಧರ್ಮವಾಗಿದೆ ಆದ್ದರಿಂದಲೇ ಗೀತಾಕಾರನು ಕರ್ತವ್ಯದ ನಿರ್ಣಯನನ್ನು ಶಾಸ್ತ್ರ ದ್ವಾರಾ ಸುವಾದಿಸಲು ತಿಳಿಸಿರುವನು. ಧಾರ್ಮಿಕ ವ್ಯವಸ್ಥೆಯು ರಕ್ಷಣೆಗಾಗಿಯೇ ಭಗವಂತನ ಅವತಾರವಾಗುತ್ತದೆ ಮಾತ್ಸ್ಯನ್ಯಾಯದ ದುರವಸ್ಥೆಯನ್ನು ದೂರಗೊಳಿಸುವುದಕ್ಕಾಗಿ ಶಾಸನವು ಅಪೇಕ್ಷಿತವಾಗಿರುತ್ತದೆ ಎಂದಿನಿಂದ ನಿಯಮ್ಯನೊ ಅಂದಿನಿಂದಲೇ ನಿಯಾಮಕನೂ ಮತ್ತಿಂದಿನಿಂದಲೇ ನಿಯಂತ್ರಣವ ವಿಧಾನವೂ ಇರಬೇಕು ಆದ್ದರಿಂದಲೇ ಅನಾದಿ ಜೀವ ಜಗತ್ತಿನ ಕಲ್ಯಾಣಕ್ಕಾಗಿ ಅನಾದಿ ಪರಮಾತ್ಮನ ವಿಧಾನವೂ ಅನಾದಿಯಾಗಿರಬೇಕು. ಅದೇ ಪರಮೇಶ್ವರಿಯ ವಿಧಾನವು ವೇದ. ಅನ್ನ ತಂಗಿಯಾಗಿರುವುದೆಯು ಔಚಿತ್ಯಾನೌಚಿತ್ಯದ ನಿರ್ಣಯವನ್ನು ಪ್ರತ್ಯಕ್ಷಾನುಮಾನದ ಆಧಾರದ ಮೇಲೆ ಮಾಡಲಾಗುವುದಿಲ್ಲ. ಅದಾದರೋ ಶಾಸ್ತ್ರದ ಮೂಲಕವೇ ಅರಿಯಲ್ಪಡತಕ್ಕದು. ಧರ್ಮದ ರಕ್ಷಣೆಗಾಗಿ ಭಗವಂತನ ಅವತಾರವಾದಾಗ ಅವನ ತುಂಬಾ ಪೋಷಕವಾದ ಲೀಲೆ ನಡೆಯುತ್ತದೆ. ಸಿನಿಮಾ ಮುಂತಾದುವು ಅದರ ಪೋಷಣಾಂಶವೂ ಆಗಲಾರದು. ವಿಧಿನಿಷೇಧವು ಸಾಧನದಲ್ಲಿರುವುದೇ ಹೊರತ್ಯ ಫಲದಲ್ಲಲ್ಲ ಭಗವಾನ್ ಕೃಷ್ಣನು ಫಲವೇ ಹೊರತು ಸಾಧನವಲ್ಲ ಸಮಾಜವಾದಿಗಳಾಗಲಿ ಧರ್ಮ ನಿರಪೇಕ್ಷಿತ ವಾದಿಗಳಾಗಲಿ ರೊಟ್ಟಿ ಬಟ್ಟೆಯ್ಯ ವ್ಯವಸ್ಥೆ ಮಾಡುವುದರಲ್ಲಿಯೇ ತಮ್ಮ ಇತಿ ಕರ್ತವ್ಯತೆಯು ಸಮಾಪ್ತವಾಯಿತೆಂದು ತಿಳಿಯುವರು, ಆದರೆ ಅದೂ ಉಚಿತವಾಗಿ ಆಗಲಿಲ್ಲ ಆಹಾರ ಉತ್ಪಾದನಕ್ಕಾಗಿ ಗೋಚರ ಭೂಮಿಯನ್ನು ಉತ್ಕೊಡನೆ ದೈವೀ ಕೋಪವು ವೇಲಿನಿಂದ ಬಂದು ಬಿಟ್ಟಿತು. ಧಾರ್ಮಿಕ ವ್ಯವಸ್ಥೆಯಿಲ್ಲದೆ ಎಲ್ಲರ ರಕ್ಷಣೆಯ ಗ್ಯಾರಂಟಿಯನ್ನು ಕೇವಲ ಲೌಕಿಕ ಸಾಧನಗಳ ಮೇಲೆ ಕೊಡುವುದು ಶಾಸ್ತ್ರಜ್ಞಾನ ದೃಷ್ಟಿಯಲ್ಲಿ ಇದಕ್ಕಿಂತ ಹೆಚ್ಚಿನ ಮೂರ್ಖತನವು ಇನ್ನಾವುದೂ ಇಲ್ಲ. (ಸಶೇಷ)

Edited, Printed and Published by M. S. Krishna Rao, at the Satyavadi Press Chamrajpuram Mysore